**ಸಾಕ್ಷಿಯನ್ನು ದಿನಾಂಕಃ 25.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ವಾದಿ ಪರ ಶ್ರೀ ಕೆ.ಎಸ್.ಎನ್, ವಕೀಲರಿಂದಃ**

ದಾವಾ ಸ್ವತ್ತಿನಲ್ಲಿ ವಾದಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನ ಪಶ್ಚಿಮಕ್ಕೆ ನಮ್ಮ ಜಮೀನು ಇರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಪೂರ್ವಕ್ಕೆ ಕಮಲಮ್ಮ ಮತ್ತು ಮಹದೇವಪ್ಪ ರವರ ಜಮೀನು ಇರುತ್ತದೆ ಎಂದರೆ ಸರಿ. ದಕ್ಷಿಣಕ್ಕೆ ನೀರು ಹರಿಯುವ ಹಳ್ಳ ಇರುತ್ತದೆ ಎಂದರೆ ಸರಿ. ನಮ್ಮ ಜಮೀನಿನ ದಕ್ಷಿಣಕ್ಕೂ ಕೂಡ ನೀರು ಹರಿಯುವ ಹಳ್ಳ ಇರುತ್ತದೆ ಎಂದರೆ ಸರಿ. ವಾದಿಯ ಜಮೀನಿನ ಉತ್ತರಕ್ಕೆ ರಸ್ತೆಯಿದ್ದು, ಸದರಿ ರಸ್ತೆಯನ್ನು ನಾನು ಮತ್ತು ಪ್ರತಿವಾದಿ ಉಪಯೋಗಿಸುತ್ತಿದ್ದೇವೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ 30-40 ತೆಂಗಿನ ಮರಗಳಿರುತ್ತವೆ ಎಂದರೆ ಸರಿ. 2015-16 ರಲ್ಲಿ ವಾದಿಯು ಭೂಮಾಪಕರಿಂದ ತಮ್ಮ ಜಮೀನನ್ನು ಅಳತೆ ಮಾಡಿಸಿರುತ್ತಾರೆ ಎಂದರೆ ಸರಿ. ಸದರಿ ಅಳತೆ ಸಮಯದಲ್ಲಿ ವಾದಿ ನಮ್ಮ ಜಮೀನನ್ನು ಒತ್ತುವರಿ ಮಾಡಿಕೊಂಡಿರುವುದು ಕಂಡುಬಂದಿರುತ್ತದೆ. ಅಳತೆ ಸಮಯದಲ್ಲಿ ವಾದಿ ನನ್ನ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆಂದು ಭೂಮಾಪಕರು ವರದಿ ತಯಾರಿಸಿರುವುದಿಲ್ಲ. ಈಗ ನನಗೆ ತೋರಿಸುತ್ತಿರುವ ನಕ್ಷೆಯು 2015-16 ರಲ್ಲಿ ಭೂಮಾಪಕರು ಅಳತೆಗೆ ಬಂದಾಗ ತಯಾರಿಸಿರುವ ನಕ್ಷೆಯಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ನಕ್ಷೆಯ ಪ್ರತಿಯನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಪಿ-21 ಎಂದು ಗುರುತಿಸಲಾಯಿತು. ಭೂಮಾಪಕರು ತಯಾರಿಸಿದ ನಕ್ಷೆಯಂತೆ ಬಾಜೂದಾರರು ವಾದಿಯ ಜಮೀನನ್ನು ಹಾಗು ವಾದಿಯು ಬಾಜೂದಾರರ ಜಮೀನನ್ನು ಒತ್ತುವರಿ ಮಾಡಿಕೊಂಡಿಲ್ಲ ಎಂಬುದು ತಿಳಿಯುತ್ತದೆ ಎಂದರೆ ವಾದಿ ನಮ್ಮ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ನಮ್ಮ ಜಮೀನನ್ನು ಪ್ರತ್ಯೇಕವಾಗಿ ಹದ್ದುಬಸ್ತ್ ಗಾಗಿ ಅರ್ಜಿ ಸಲ್ಲಿಸಿ ಅಳತೆ

ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 112 ರ ಜಮೀನನ್ನು ನಾನು, ನನ್ನ ತಾಯಿ, ನನ್ನ ತಂಗಿ ಮತ್ತು ನನ್ನ ತಮ್ಮ ನಾಲ್ಕು ಜನರು ಸೇರಿ ವಿಭಾಗ ಮಾಡಿಕೊಂಡಿದ್ದು, ಅದರಂತೆ ನಿಡಿ-5 ರಂತೆ ನಕ್ಷೆ ತಯಾರಿಸಿರುತ್ತಾರೆ ಎಂದರೆ ಸರಿ. ನಾವು ನೋಂದಾಯಿತ ವಿಭಾಗ ಪತ್ರ ಮಾಡಿಕೊಂಡಿದ್ದು, ಆ ಸಮಯದಲ್ಲಿ ನಿಡಿ-5 ನ್ನು ತಯಾರಿಸಿರುತ್ತಾರೆ ಎಂದರೆ ಸರಿ.

**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದಿನ ಪಾಟೀಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ,**

**ನಂಜನಗೂಡು.**